(44)

ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)
ಉಪತಹಶೀಲ್ದಾರವರ ಕಾರ್ಯಾಲಯ ನಾಡಕಛೇರಿ ಗುಡೇಕೋಟೆ

ಸಂ/ಕಂ/ಹ.ಬ./ನಾಕಗು/29/2015-16.    ದಿನಾಂಕ:21-06-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಪಾತಣ್ಣ ತಂದೆ ಲೇಟ್ ಬೊಮ್ಮಯ್ಯ<br>2)ಬೊಮ್ಮಣ್ಣ ತಂದೆ ಲೇಟ್ ಬಸಣ್ಣ<br>3)ನಿಂಗಯ್ಯ ತಂದೆ ಲೇಟ್ ಬೊಮ್ಮಯ್ಯ<br>ಮಾರಮ್ಮನಹಳ್ಳಿ ಗ್ರಾಮ<br>ಕೂಡ್ಲಿಗಿ ತಾಲೂಕು | ಕಂದಾಯ ಪರಿವೀಕ್ಷಕರು<br>ಗುಡೇಕೋಟೆ |
| ಕೂಡ್ಲಿಗಿ ತಾಲೂಕು ಹುರಡಿಹಳ್ಳಿ ಗ್ರಾಮದ ಸನಂ 253. ವಿಸ್ತೀರ್ಣ 15-21. ಎಕ್ರೆ ಜಮೀನನ್ನು ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಹುರಡಿಹಳ್ಳಿ ಗ್ರಾಮದ ಸನಂ 253. ವಿಸ್ತೀರ್ಣ 15-21. ಎಕ್ರೆ ಜಮೀನನ್ನು ಸದರಿ ತಾಲೂಕು ಮಾರಮ್ಮನಹಳ್ಳಿ ಗ್ರಾಮದ ಪಾತಣ್ಣ ತಂದೆ ಲೇಟ್ ಬೊಮ್ಮಯ್ಯ ಇವರು ದಿನಾಂಕ 23-12-2013 ರ ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಹುರಡಿಹಳ್ಳಿ ಇವರು ನಮೂನೆ-21 ನೋಟಿಸನ್ನು ದಿನಾಂಕ 14-01-2015 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ವಂಶವೃಕ್ಷ ಸರಿಇಲ್ಲದ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 05/2014-15.. ದಿನಾಂಕ 15-02-2015 ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 08-09-2015. ರಿಂದ 21-06-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ಅವರ ಪರ ನ್ಯಾಯಾವಾದಿಗಳು ಹಾಜರಾಗಿರುತ್ತಾರೆ. ಅರ್ಜಿದಾರರ ಪರ ನ್ಯಾಯಾವಾದಿಗಳು ಹುರಡಿಹಳ್ಳಿ ಗ್ರಾಮದ ಸನಂ 253. ವಿಸ್ತೀರ್ಣ 15-21. ಎಕ್ರೆ ಜಮೀನು ಅರ್ಜಿದಾರರ ಅಣ್ಣನಾದ ನಿಂಗಯ್ಯ ತಂದೆ ಲೇಟ್ ಬೊಮ್ಮಯ್ಯ ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇರುತ್ತದೆ. ಸದರಿ ಜಮೀನು ಅರ್ಜಿದಾರರ ಪಿತ್ರಾರ್ಜಿತ ಜಮೀನು ಆಗಿದ್ದು ದಿನಾಂಕ 23-12-2013 ರಂದು ತಮ್ಮ ಸಂಪೂರ್ಣ ಒಪ್ಪಿಗೆಯಿಂದ ಅರ್ಜಿದಾರರ ಹೆಸರಲ್ಲಿ ಪಾಲು ವಿಭಾಗದ ಪತ್ರ ಬರೆಯಸಿ ಕೊಟ್ಟಿರುತ್ತಾರೆ. ಕಾರಣ ಸದರಿ ಪಾಲು ವಿಭಾಗದ ಪತ್ರ ಪ್ರಕಾರ ಅರ್ಜಿದಾರರ ಹೆಸರಲ್ಲಿ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಪರ ನ್ಯಾಯಾವಾದಿಗಳ ಹೇಳಿಕೆಗಳನ್ನು ಕೇಳಿ ಸದರಿ ಜಮೀನಿನ ಬಗ್ಗೆ ಕಂದಾಯ ಪರಿವೀಕ್ಷಕರು ಗುಡೇಕೋಟೆ ಇವರು ಗ್ರಾಮದಲ್ಲಿ ಮರು ವಿಚಾರಣೆ ಮಾಡಲಾಗಿ ವಂಶವೃಕ್ಷ ಹೊಂದಾಣಿಕೆ ಇಲ್ಲದ ಕಾರಣ ಉಭಯರು ಯಥಾಸ್ಥಿತಿಯಂತೆ ಮುಂದುವರೆಸಲು ಮನವಿ ಮಾಡಿ ಕೊಂಡಿರುತ್ತಾರೆಂದು ವರದಿ ಸಲ್ಲಿಸಿರುತ್ತಾರೆ. ಕಾರಣ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಹುರಡಿಹಳ್ಳಿ ಗ್ರಾಮದ ಸನಂ 253. ವಿಸ್ತೀರ್ಣ 15-21. ಎಕ್ರೆ ಜಮೀನು ದಿನಾಂಕ 23-12-2013 ರ ಪಾಲು ವಿಭಾಗ ಪತ್ರ ಹೊಂದಾಣಿಕೆ ಇಲ್ಲದ ಕಾರಣ ಅರ್ಜಿದಾರರ ಕೋರಿಕೆಯನ್ನು ತಳ್ಳಿಹಾಕುತ್ತಾ ಯಥಾಸ್ಥಿತಿಯಂತೆ ಮುಂದುವರೆಸಲು ಆದೇಶಿಸಿ ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ಈ ಹಂತದಲ್ಲಿ ಮುಕ್ತಾಯಗೊಳಿಸಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 21-06-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಗುಡೇಕೋಟೆ
ಗುಡೇಕೋಟೆ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಪಾತಣ್ಣ ತಂದೆ ಲೇಟ್ [illegible]ಮ್ಮಯ್ಯ. ಬೊಮ್ಮಣ್ಣ ತಂದೆ ಲೇಟ್ ಬಸಣ್ಣ ಹಾಗೂ ಇತರರು ಮಾರಮ್ಮನಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಅಂಗಡಿ ರವಿ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
2) ಕಂದಾಯ ಪರಿವೀಕ್ಷಕರು ಗುಡೇಕೋಟೆ ಇವರಿಗೆ ಮಾಹಿತಿಗಾಗಿ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.